

ದಕ್ಷಿಣಾ ಆಫ್ರಿಕಾದ ಬೌಲಿಂಗ್ ಶಕ್ತಿತ್ರಯರಲ್ಲಿ ಒಬ್ಬರಾದ ರಬಾಡ

2015ರ ನಂತರ ಒಂದೇ ಒಂದು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯ ಆಡಿರುವ ಆಂಡ್ರೆ ರಸೆಲ್ ನೆತ್ತಿಮೇಲಿನ ತಮ್ಮ ಬಣ್ಣ ಹಚ್ಚಿದ ಕೂದಲನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದಾರೆ. 2016ರ ನಂತರ ವಿಂಡೀಸ್ ತಂಡದ ಪರವಾಗಿ ಆಡದ ಸುನೀಲ್ ನರೇನ್ ವಿಶ್ವಕಪ್ ಆಡುವ ತಂಡಕ್ಕೆ ಆಯ್ಕೆಯಾಗಿಲ್ಲ. ಬೆರಳಿನ ಲಿಗಮೆಂಟು ಸರಿಯಾಗಿಲ್ಲದಿದ್ದರೂ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡಿ ಗಮನಸೆಳೆದ ಅವರು, ದೀರ್ಘಾವಧಿಯ ಪಂದ್ಯ ಆಡುವಷ್ಟು 'ಫಿಟ್' ಅಲ್ಲ. ಹೀಗಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ. ಫೇಬಿಯಸ್ ಅಲೆನ್ ಎಂಬ ಹೊಸ ಹುಡುಗ ಸಿಕ್ಕ ಅವಕಾಶವನ್ನು ಹಣ್ಣಾಗಿಸಿಕೊಳ್ಳಲು ತುದಿಗಾಲ ಮೇಲೆ ನಿಂತಿದ್ದಾನೆ. ಕೀರನ್ ಪೊಲಾರ್ಡ್ ಬಾಹುಬಲವೂ ಈ ಸಲ ವಿಂಡೀಸ್‌ಗೆ ಇಲ್ಲ. ಹೀಗಿದ್ದೂ ವೆಸ್ಟ್ ಇಂಡೀಸ್ 'ಡಾರ್ಕ್ ಹಾರ್ಸ್'. ಕಳೆದ ಕೆಲವು ವರ್ಷಗಳಲ್ಲಿ ಎರಡು ಸಲ ಟ್ವೆಂಟಿ20 ವಿಶ್ವಕಪ್ ಗೆದ್ದಿರುವ ಆ ತಂಡದ ಕ್ರಿಸ್ ಗೇಲ್‌ನಂಥ ಪ್ರಮುಖ ಆಟಗಾರರು ಸಂಯಮ ತೋರಿದಲ್ಲಿ ವಿಶ್ವಕಪ್‌ನಲ್ಲಿ ಗಮನಸೆಳೆಯುವುದರಲ್ಲಿ ಅನುಮಾನವಿಲ್ಲ ಎಂದು ಕ್ರಿಕೆಟ್ ವಿಶ್ಲೇಷಕರು ಹೇಳುತ್ತಿದ್ದಾರೆ. ಅಂಥ ಮಾತುಗಳೇ ನಾಯಕ ಜೇಸನ್ ಹೋಲ್ಡರ್ ಆತ್ಮವಿಶ್ವಾಸ ಹೆಚ್ಚಿಸಿವೆ. ಡರೆನ್ ಬ್ರಾವೋ, ಶಿಮ್ರನ್ ಹೆಟ್ಮೆಯರ್, ನಿಕೊಲಸ್ ಪೂರನ್, ಕಾರ್ಲೊಸ್ ಬ್ರಾಥ್‌ವೈಟ್ ಇವರೆಲ್ಲರ ಭುಜಗಳನ್ನು ನೋಡಿದರೆ ಎದುರಾಳಿಯ ಗಂಟಲು ಉಬ್ಬುವುದರಲ್ಲಿ ಅನುಮಾನವಿಲ್ಲ.

ಇಪ್ಪತ್ತೊಂದು ತಿಂಗಳ ಹಿಂದೆ ಮೊಹಮ್ಮದ್ ಆಮೀರ್ ಎಂಬ ಸ್ವಿಂಗ್ ಬೌಲರ್ ಭಾರತದ ದಿಗ್ಗಜ ಬ್ಯಾಟ್ಸ್‌ಮನ್‌ಗಳನ್ನು ಹೇಗೆ ಕಾಡಿದ್ದ ಎನ್ನುವ ನೆನಪು ಇನ್ನೂ ಮಾಸಿಲ್ಲ. ಚಾಂಪಿಯನ್ಸ್ ಟ್ರೋಫಿ ಫೈನಲ್ಸ್‌ನಲ್ಲಿ ಶಿಖರ್ ಧವನ್, ರೋಹಿತ್ ಶರ್ಮ, ವಿರಾಟ್ ಕೊಹ್ಲಿ – ಮೂವರನ್ನೂ ಬೇಗ ಪೆವಿಲಿಯನ್‌ಗೆ ಕಳುಹಿಸಿ ಭಾರತದ ಜಂಘಾಬಲ ಉಡುಗಿಹೋಗುವಂತೆ ಮಾಡಿದ್ದ ಆಮೀರ್ ಈ ಸಲ ಪಾಕಿಸ್ತಾನದ ವಿಶ್ವಕಪ್ ತಂಡದಲ್ಲಿ ಇಲ್ಲ. ಭಾರತದ ವಿರುದ್ಧ ಚಾಂಪಿಯನ್ಸ್ ಟ್ರೋಫಿಯಲ್ಲಿ ಅಂಥ ಸಾಧನೆ ಮಾಡಿದ್ದ ವೇಗದ ಬೌಲರ್, ಆಮೇಲೆ ಒಟ್ಟು 101 ಓವರ್‌ಗಳನ್ನು ಬೌಲ್ ಮಾಡಿ ಬರೀ 5 ವಿಕೆಟ್ ಪಡೆದಿರುವುದು ಎಷ್ಟೋ ಜನರಿಗೆ ಗೊತ್ತಿರಲಿಕ್ಕಿಲ್ಲ. 'ಆಮೀರ್ ಅವನತಿ' ಎಂದೇ ಕೆಲವರು ಇದನ್ನು ವ್ಯಾಖ್ಯಾನಿಸುತ್ತಿದ್ದರೆ, 'ಇಂಗ್ಲೆಂಡ್‌ನ ಪಿಚ್‌ಗಳು ಈ ಬೌಲರ್‌ಗೆ ಹೇಳಿ ಮಾಡಿಸಿದಂತೆ ಇರುವುದರಿಂದ ಅವನನ್ನು ಆಡಿಸುವುದು ಉತ್ತಮ' ಎಂದು ಶೋಯೆಬ್ ಅಖ್ತರ್ ಸಲಹೆ ಕೊಟ್ಟಿದ್ದಾರೆ. ಕೆಲವು ಅರೆಬೆಂದ ಕಾಳುಗಳಂಥ ಆಟಗಾರರು, ಶೋಯೆಬ್ ಮಲಿಕ್ ತರಹದ ಅನುಭವಿಯನ್ನು ಜತೆಗಿಟ್ಟುಕೊಂಡಿರುವ ನಾಯಕ ಸರ್ಫರಾಜ್ ಅಹಮದ್ ವಿಕೆಟ್ ಹಿಂದೆ ನಿಂತರೂ ಧೋನಿಯಂತೆ ಆಗಲಾರದ ಸ್ಥಿತಿಯಲ್ಲಿದ್ದಾರೆ. ಇದು ಪಾಕಿಸ್ತಾನ ಕ್ರಿಕೆಟ್ ಪರಿಸ್ಥಿತಿಗೂ ಹಿಡಿದ ಕನ್ನಡಿ. ಬ್ಯಾಟಿಂಗ್ ರ್‍ಯಾಂಕಿಂಗ್‌ನಲ್ಲಿ ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿರುವ ಬಾಬರ್ ಆಜಮ್ ಮಧ್ಯಮ ಕ್ರಮಾಂಕಕ್ಕೆ ಕಸುವು ತುಂಬಿರುವುದು ಆ ತಂಡದ ಆತ್ಮವಿಶ್ವಾಸಕ್ಕೆ ಕಾರಣವಾಗಿದೆ. ಉಸ್ಮಾನ್ ಶಿಂವಾರಿ, ಶಹೀನ್ ಅಫ್ರಿದಿ ಬೌಲಿಂಗ್ ಹೇಗಿದ್ದೀತೆಂಬ ಕುತೂಹಲವೂ ಇದೆ.

ದಿಮೂತ್ ಕರುಣರತ್ನೆ ಇತ್ತೀಚೆಗೆ ಪಾರ್ಟಿ ಮಾಡಲಿಕ್ಕೆ ಕಾರಣವಿದೆ. ಶ್ರೀಲಂಕಾ ವಿಶ್ವಕಪ್ ತಂಡದ ನಾಯಕರಾಗಿ ಆಯ್ಕೆಯಾದದ್ದು ಅವರಿಗೂ ಅಚ್ಚರಿಯ ವಿದ್ಯಮಾನವೇ ಹೌದು. 2015ರ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯದ ನಂತರ ಅವರು ಇದುವರೆಗೆ ಒಂದೂ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಕಾಣಿಸಿಕೊಂಡಿಲ್ಲ. ಟೆಸ್ಟ್ ಕ್ರಿಕೆಟ್‌ನಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಲಂಗರು ಹಾಕುವ ಮೂಲಕ